ನಿಯಮ ೩೭ಳಿರ ಮೇರೆಗೆ

೧) ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಆನೆ ಹಾವಳಿಯಂನ್ನು ತಡೆಗಟ್ಟಲು ಎಲೆಕ್ಟ್ರಿಕ್ ಫೆನ್‌ಸಿಂಗ್ ಹಾಕಲು ಒತ್ತಾಯ

ಶ್ರೀ ಕೆ. ಎಸ್. ನಾಗರತ್ನಮ್ಮ.— ಆನೆ ಹಾವಳಿ ಸೂಚನೆ ಕಳಿಸಿದ್ದರ ಬಗ್ಗೆ ಇಷ್ಟೊತ್ತು ಚರ್ಚೆ ಯಾಯಿತು. ನನ್ನ ಸೂಚನೆ ಏನೆಂದರೆ ಈಗ ನಮ್ಮ ತಾಲ್ಲೂಕ್ ಸೇರಿ ಇದಕ್ಕಾಗಿ ೨ ಲಕ್ಷ ರೂ. ಬಜೆಟ್ ಇಟ್ಟಿದ್ದಾರೆ. ಇಡೀ ಮೈಸೂರು ಡಿಸ್ಟ್ರಿಕ್ಟಿಗೆ ಇದು ಅನ್ವಯ ಆಗುತ್ತದೆ. ಎಲ್ಲೋ ಬಸ್ ಬಿದ್ದು ಜನ ಸತ್ತರೆ ಇಲ್ಲವೇ, ವಿಮಾನ ಅಪಘಾತದಲ್ಲಿ ಬಿದ್ದು ಜನ ಸತ್ತರೆ ಲಕ್ಷಾಂತರ ರೂ.ಗಳ ಪರಿಹಾರ ಸಿಗುತ್ತದೆ ಆದರೆ ಇಡೀ ಜಿಲ್ಲೆಯಲ್ಲಿ ಬೆಳೆದ ಬೆಳೆ ಕಳೆದುಕೊಂಡು ಜೀವನವನ್ನೂ ಕಳೆದುಕೊಂಡರೆ ಇಡೀ ಜಿಲ್ಲೆಗೆ ೨ ಲಕ್ಷ ರೂ. ಒದಗಿಸಿದರೆ ಏನು ಸಾಲುತ್ತದೆ ಮದ್ರಾಸ್‌ನಲ್ಲಿ ಎಲೆಕ್ಟ್ರಿಕ್ ಪ್ರೊಜೆಕ್ಟ್ ಎಂದು ಮಾಡಿ ಎಲೆಕ್ಟ್ರಿಕ್ ಫೆನ್ಸಿಂಗ್ ಹಾಕಿಸಿದ್ದಾರೆ. ಅದೇ ರೀತಿ ಇಲ್ಲೂ ಮಾಡಿಸಬೇಕು. ಟ್ರೆಂಚು ಗಿಂಚು ಏನೂ ನಡೆಯೋಲ್ಲ. ಆನೆ ಅಳತೆಯಷ್ಟು ತೊಡುವುದೇ ಇಲ್ಲ. ಸುಮ್ಮನೆ ಗುದ್ದಲಿ ಆಡಿಸಿ ದುಡ್ಡು ಎಣಿಸಿ ಕೊಳ್ಳುತ್ತಾರೆ. ಅದರ ಬದಲು ಎಲೆಕ್ಟ್ರಿಕ್ ಫೆನ್ಸಿಂಗ್ ಹಾಕಿಸಿಕೊಡಿ ಎಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್.— ಈಗ ಟ್ರೆಂಚ್ ಹೊಡೆದಿರುವುದು ಕೆಲವು ಕಡೆ ಇದೆ. ಅದೂ ಕೂಡ ದಂಬಾರಿ, ತಮಿಳ್ನಾಡಿನವರಿಗೆ ಅರಣ್ಯಸೆರಗು ತಂಬಾ ಕಡಿಮೆ ಆದರೆ ನಮಗೆ ತೀರ್ಥಹಳ್ಳಿ ಯಿಂದ ಸಹ್ಯಾದ್ರಿ ತಪ್ಪಲು ದೊಡ್ಡದಿದೆ. ಮಾನ್ಯ ಸದಸ್ಯರು ಏನು ಹೇಳಿದ್ದಾರೋ ಅದನ್ನು ವಿಚಾರಿಸೋಣ ಹಾಗೆಯೇ ಪ್ರೊಜೆಕ್ಟ್ ಕೂಡ ದುಬಾರಿ ಎನ್ನುವುದನ್ನು ಅವರೂ ಒಪ್ಪಿಕೊಳ್ಳುತ್ತಾರೆಂದು ನಂಬಿದ್ದೇನೆ. ಇದಕ್ಕಾಗಿ ಹಣ ಏನು ಇಡಲಾಗಿದೆ ಅದು ಕಡಿಮೆ ಇದೆ. ಅದನ್ನು ಹೆಚ್ಚು ಮಾಡುವ ಬಗ್ಗೆ ಪರಿಶೀಲಿಸುತ್ತೇವೆ.

೨) ಬೈಲಹೊಂಗಲ ನಗರದಲ್ಲಿ ಇಂಡಸ್ಟ್ರಿಯಲ್ ಶೆಡ್ಸ್ ಕಟ್ಟಲು ಒತ್ತಾಯ

ಶ್ರೀ ಶಿವಾನಂದ ಎಚ್. ಕೌಜಲಗಿ.— ಬೆಳಗಾವಿ ಜಿಲ್ಲೆಯ ಬೈಲಹೊಂಗಲ ನಗರದಲ್ಲಿ ಇಂಡಸ್ಟ್ರಿಯಲ್ ಶೆಡ್‌ಕಟ್ಟುವ ಸಲುವಾಗಿ ಇಂಡಸ್ಟ್ರಿಯಲ್ ಇಲಾಖೆಯವರು (ಕೆ.ಎಸ್.ಎಸ್.ಐ.ಡಿ.ಸಿ) ಹತ್ತು ಎಕರೆ ಜಮೀನನ್ನು ಊರವರು ತಮ್ಮ ಊರಲ್ಲಿ ಉದ್ಯಮಗಳು ಬರಬೇಕು ಎಂಬ ಉದ್ದೇಶದಿಂದ ಪುಕ್ಕಟೆಯಾಗಿ ಗೋಮಾಳ ಜಮೀನನ್ನು ಇಂಡಸ್ಟ್ರಿಯಲ್ ಇಲಾಖೆಗೆ ಕೊಟ್ಟಿರುವರು. ಆ ಜಾಗದಲ್ಲಿ ಶೆಡ್‌ಗಳನ್ನು ಕಟ್ಟುವ ಸಲುವಾಗಿ ಟೆಂಡರ್ ಸಹ ಕರೆಯಲಾಗಿದ್ದಿತು.

ಆದರೆ ಆ ಜಾಗದಲ್ಲಿ ಶೆಡ್‌ಗಳನ್ನು ಕಟ್ಟುವುದನ್ನು ಬಿಟ್ಟು ಕಕ್ಕಯ್ಯ ಸಹಕಾರಿ ಸಂಘಕ್ಕೆ ಕೊಡ ಬೇಕು ಎಂದು ತೀರ್ಮಾನ ಮಾಡಿರುವುದಾಗಿ ತಿಳಿದುಬಂದಿದೆ. ಬೈಲಹೊಂಗಲದಲ್ಲಿ ಯಾವುದೇ ಕಕ್ಕಯ್ಯ ಸಹಕಾರಿ ಸಂಘ ವಿರುವುದಿಲ್ಲ. ಅದು ಅನಾವಶ್ಯಕ ಸಂಸ್ಥೆ ಆದಕಾರಣ ಶೆಡ್ ಕಟ್ಟುವುದನ್ನು ಬಿಟ್ಟು ಬೇರೆ ಯಾರಿಗೂ ಈ ಜಾಗ ಮಾಡಬಾರದು. ಕೆಲವು ಹಿತಾಸಕ್ತಿಗಳು ಕೂಡಿಕೊಂಡು ಬೇರೆಯವರಿಗೆ ಹಸ್ತಾಂತರ ನಡೆಸುತ್ತಿರುವುದಾಗಿ ತಿಳಿದಿದೆ. ಆದಕಾರಣ ಅಲ್ಲಿ ಶೆಡ್‌ಗಳ ಅವಶ್ಯಕತೆ ಬಹಳೇ ಇದ್ದು ಕೊಂಡರೇ ಶೆಡ್‌ಗಳನ್ನು ಕಟ್ಟುವುದಾಗಬೇಕು ಎಂದು ನಾನು ಮಾನ್ಯ ಉದ್ದಿಮೆ ಮಂತ್ರಿಗಳ ಗಮನವನ್ನು ತಮ್ಮ ಮಂಜಿಾತರ ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.— ಇದರ ಬಗ್ಗೆ ವರದಿ ತರಿಸಿ, ಒಂದು ಪಕ್ಷ ಕೈಗಾರಿಕಾ ಶೆಡ್ ಕಟ್ಟಿಸುತ್ತಿದ್ದರೆ ಅದಕ್ಕೆ ಏರ್ಪಾಡು ಮಾಡುತ್ತೇನೆ.

ಅಧ್ಯಕ್ಷರು.— ಶ್ರೀ ಕೆ. ಎಂ. ಪುಟ್ಟರವರು ಆಬ್ಸೆಂಟ್